## ಕಳೆದ ಸಂಚಿಕೆಯಲ್ಲಿ



ಡ್ರಗ್ಸ್ ಪೆಡ್ಲಿಂಗ್ ಕೇಸ್‌ನಲ್ಲಿ ಸಿಲುಕಿಕೊಂಡಿದ್ದ ಮೊಮ್ಮಗನಿಗಾಗಿ ಪೊಲೀಸರಿಗೆ ಒಂದು ಕೋಟಿ ರೂಪಾಯಿ ಕೊಡಲು ಗುನ್ನಾಲಾಲ್ ಹಿಂದೆ ಮುಂದೆ ನೋಡಲಿಲ್ಲ. ಮೊಮ್ಮಗನ ಬಗೆಗಿನ ತಾತನ ಪ್ರೀತಿ ಅಪರಿಮಿತವಾಗಿತ್ತು. ಮೊಮ್ಮಗನ ಮರೆವನ್ನು ಹೋಗಲಾಡಿಸಲಿಕ್ಕಾಗಿ ಮಿಡ್ ಬ್ರೈನ್ ಆ್ಯಕ್ಟಿವೇಟ್ ಮಾಡುವ ದುಬಾರಿ ಕ್ಲಾಸ್‌ಗೆ ಸೋನಾನನ್ನು ಸೇರಿಸಿದ. ಜೀವನ ಸಹಜವಾಗಿದೆ, ಸುಂದರವಾಗಿದೆ ಎಂದುಕೊಳ್ಳುವ ಸಂದರ್ಭದಲ್ಲೇ ಸೋನಾನಿಗೆ ಕನಸೊಂದು ಬಿತ್ತು. ಸ್ವಪ್ನಸುಂದರಿ ಅಪೂರ್ವ ನೃತ್ಯಗಾರ್ತಿಯಾಗಿದ್ದಳು. ಕಾಮನಬಿಲ್ಲನ್ನು, ಇಲ್ಲವೇ ಕಾಮನಬಿಲ್ಲಿನಲ್ಲಿನ ಎಲ್ಲ ಬಣ್ಣಗಳನ್ನೂ ಒಳಗೊಂಡ ಗುಲಾಬಿ ಹೂವನ್ನು ತಂದುಕೊಟ್ಟರೆ ನಿನ್ನೊಂದಿಗೆ ಡಾನ್ಸ್ ಮಾಡುತ್ತೇನೆ ಎಂದು ಸೋನಾನಿಗೆ ಸವಾಲೊಡ್ಡಿದಳು. ಮೊಮ್ಮಗನ ಆಸೆ ಈಡೇರಿಸಲು ತಾತ ವಜ್ರಗಳ ಗುಲಾಬಿಯನ್ನೇ ಮಾಡಿಸಿಕೊಟ್ಟ. ಆದರೆ, ಹುಡುಗಿ ಸುಲಭಕ್ಕೆ ಸೋಲುವವಳಾಗಿರಲಿಲ್ಲ. ಮೊಮ್ಮಗನಿಗೆ ಬಿದ್ದ ಇದೇ ಕನಸು ತಾತನಿಗೂ ಬಿದ್ದಿತ್ತು. ಒಂದೇ ಕನಸು ಇಬ್ಬರಿಗೂ ಬಿದ್ದುದು ಅವರ ಬದುಕಿನ ತಿರುವುಗಳಲ್ಲೊಂದಾಗಿತ್ತು.

‘ಗುನ್ನಾಲಾಲ್ ಜಿ ನೀವು ತಮಾಷೆ ಮಾಡುತ್ತಿಲ್ಲವಷ್ಟೆ? ಏಕೆಂದರೆ ವಜ್ರದ ಗುಲಾಬಿಯನ್ನು ಅರಸಿ ಬಂದ ಮೊದಲ ಗಿರಾಕಿ ನೀವು. ವಜ್ರವೊಂದೇ ಕಾಮನಬಿಲ್ಲಿನ ಎಲ್ಲಾ ಬಣ್ಣಗಳನ್ನು ಒಳಗೊಂಡಿರುತ್ತದೆ. ಇನ್ನು ವಜ್ರದ ವ್ಯಾಪಾರ ಕೂಡ ನಿಮ್ಮ ಬಟ್ಟೆ ವ್ಯಾಪಾರದಂತೆಯೇ. ಬಟ್ಟೆಗಿಂತಲೂ ವಜ್ರದ ವ್ಯಾಪಾರದಲ್ಲಿ ದೋಖಾ ಜಾಸ್ತಿ. ನಮ್ಮ ನೀರವ್ ಮೋದಿ ನೋಡಿ, ಕೋಟಿ ಕೋಟಿ ದೋಖಾ ಮಾಡಿ ಈಗ ದೇಶವನ್ನೇ ಬಿಟ್ಟು ಹೋದ. ವಜ್ರ ವ್ಯಾಪಾರದಲ್ಲಿ ಮುಂಬಯಿಗೆ ಕೆಟ್ಟ ಹೆಸರು ತಂದವನು ಅವನು. ಅವನಾಗಿದ್ದರೆ ನಿಮಗೆ ವಜ್ರಗಳಲ್ಲಿ ಹೊಳೆಯುವ ಗುಲಾಬಿಯನ್ನು ಮಾಡಿಕೊಡುತ್ತಿದ್ದ. ಗುನ್ನಾಲಾಲ್ ಜಿ ಹಲವು ವಜ್ರಗಳನ್ನು ಸೇರಿಸಿ ಗುಲಾಬಿಯನ್ನು ಮಾಡಿ ಅದರ ಮೇಲೆ ಬೆಳಕನ್ನು ಬಿಟ್ಟರೆ...! ಮೈ ಗಾಡ್! ಗುನ್ನಾಲಾಲ್ ಜಿ ಅದನ್ನು ನೋಡುವವರ ಕಣ್ಣುಗಳಿಗೆ ಕತ್ತಲು ಆವರಿಸಿಬಿಡುವಂತಹ ವಿಚಿತ್ರ ಸಂಯೋಜನೆ ಉಂಟಾಗುತ್ತದೆ. ಇಷ್ಟಕ್ಕೂ ಅಂಥ ಗುಲಾಬಿ ಬೇಕಿರುವುದಾದರೂ ಯಾರಿಗೆ?’ ವಿಕ್ರಂ ಜಯಂತಿ ಲಾಲನ ಮಾತುಗಳನ್ನು ಕೇಳಿಸಿಕೊಳ್ಳದವನಂತೆ ಗುನ್ನಾಲಾಲ್ ‘ಆ ವಿಷಯ ಬಿಡಿ ಜಯಂತಿಲಾಲ್ ಜಿ, ಈಗ ನಿಮ್ಮ ತಮ್ಮನ ಮಗ ಹೇಗಿದ್ದಾನೆ? ಸೂರತ್‌ನಲ್ಲಿಯೇ ವ್ಯಾಪಾರ ಮಾಡಿಕೊಂಡಿರುವನೋ ಇಲ್ಲ ಮುಂಬಯಿಗೇನಾದರೂ ಶಿಫ್ಟ್ ಆದನೊ’ ಎಂದು ಮಾತು ಚೆಲ್ಲಿದ.

ಜಯಂತಿ ಲಾಲನಿಗೆ ಗುನ್ನಾಲಾಲನ ಮಾತುಗಳು ವಿಚಿತ್ರವಾಗಿ ಕಂಡವು. ಆತನಲ್ಲಿ ತುಸು ಕೋಪವೂ ಹುಟ್ಟಿಕೊಂಡಿತ್ತು. ಕಾರಣವೆಂದರೆ, ತಮ್ಮನಿಗೆ ಮದುವೆಯಾಗಿ ಹದಿಮೂರು ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ನೂರಾರು ದೇವಸ್ಥಾನಗಳನ್ನು ತಮ್ಮ ಮತ್ತು ತಮ್ಮನ ಹೆಂಡತಿ ಸುತ್ತಿ ಬಂದಿದ್ದರೂ ಪ್ರಯೋಜನವಾಗಿರಲಿಲ್ಲ. ಮುಂಬಯಿಯ ಲೀಲಾವತಿ ಆಸ್ಪತ್ರೆಯ ಸ್ಪೆಷಲಿಸ್ಟ್‌ಗಳಿಗೂ ತೋರಿಸಿದ್ದಾಯಿತು. ಪರೀಕ್ಷೆ ಮಾಡಿದ ಪ್ರತಿಯೊಬ್ಬ ಡಾಕ್ಟರ್ ಕೂಡ ಗಂಡ ಹೆಂಡತಿ ಇಬ್ಬರಲ್ಲೂ ಯಾವುದೇ ನ್ಯೂನತೆ, ದೋಷ ಇಲ್ಲವೆಂದು ಹೇಳಿದ್ದರು! ಆದರೂ ಮಕ್ಕಳು ಏಕೆ ಆಗಲಿಲ್ಲ ಎನ್ನುವ ಪ್ರಶ್ನೆಗೆ ಯಾರಲ್ಲೂ ಉತ್ತರ ಸಿಕ್ಕಿರಲಿಲ್ಲ. ಅದೊಂದು ಬಾಧೆ ಇಡೀ ವಿಕ್ರಂ ಜಯಂತಿ ಲಾಲ್ ಕುಟುಂಬವನ್ನು ಬಹಳವಾಗಿ ಕಾಡುತ್ತಿತ್ತು. ಹಾಗಾಗಿ ಗುನ್ನಾಲಾಲನ ಮಾತುಗಳು ಜಯಂತಿ ಲಾಲನ ಹೊಟ್ಟೆಯಲ್ಲಿ ಉರಿಯನ್ನು ಎಬ್ಬಿಸಿದ್ದವು. ಬೇಕೆಂದೇ ಗುನ್ನಾಲಾಲ್ ಈ ಪ್ರಶ್ನೆಯನ್ನು ಕೇಳುತ್ತಿರಬಹುದೆಂಬ ಗುಮಾನಿ ಹುಟ್ಟಿತು ಜಯಂತಿ ಲಾಲನ ಮನಸ್ಸಿನಲ್ಲಿ. ಏಕೆಂದರೆ ಸಮುದಾಯದ ಅನೇಕ ಜನ ಸಿಕ್ಕಿದಾಗಲ್ಲ ‘ತಮ್ಮನಿಗೆ ಮಗುವಾಯಿತೆ?, ಅಷ್ಟೊಂದು ಸಂಪತ್ತನ್ನು ಮಕ್ಕಳಿಲ್ಲದಿದ್ದರೆ ಏನು ಮಾಡುವುದು?, ಇನ್ನೊಂದು ಮದುವೆ ಮಾಡಿ ನೋಡಿ ವಿಕ್ರಂ ಜಿ ಗಂಡು ಮಗು ಆದ್ರೂ ಆಗಬಹುದು, ನಿಮ್ಮ ತಮ್ಮನಲ್ಲೇ ಏನಾದರೂ ಮಿಸ್ಟೇಕ್ ಇರಬೇಕು, ಯಾರಾದರೂ ಫಾರಿನ್ ಡಾಕ್ಟರಿಗೆ ತೋರಿಸಿ ನೋಡಿ’ ಇತ್ಯಾದಿಯಾಗಿ ಖುಷಿಯಿಂದಲೇ ಕೇಳುತ್ತಿದ್ದರು. ಇಂದು ಈ ಗುನ್ನಾಲಾಲ್ ಕೂಡ ಹಾಗೆ ತಮಾಷೆ ಮಾಡುತ್ತಿರಬಹುದೇ ಅನ್ನಿಸಿ ವಿಕ್ರಂ ಜಯಂತಿ ಲಾಲ್ ‘ಹೌದು ಗುನ್ನಾಲಾಲ್ ಜಿ, ನನ್ನ ತಮ್ಮನಿಗೆ ಮಕ್ಕಳಾಗಿಲ್ಲ. ಹಾಗಂತ ಸಾಯಲಿಕ್ಕೆ ಆಗುತ್ತದೆಯೆ? ನಾನು ಮನಸ್ಸು ಮಾಡಿದರೆ ಐಶ್ವರ್ಯ ರೈ ಮಗಳನ್ನೇ ದತ್ತು ತೆಗೆದುಕೊಂಡು ಸಾಕಬಲ್ಲೆ’ ಎಂದು ಖಾರವಾಗಿಯೇ ಹೇಳಿದ್ದ.

ಗುನ್ನಾಲಾಲನಿಗೆ ತನಗೆ ಬಿದ್ದ ಕನಸು ತನ್ನನ್ನು ದಾರಿ ತಪ್ಪಿಸುತ್ತಿದೆಯೆಂಬ ಸ್ಪಷ್ಟ ಅರಿವಾಗಿ ತನ್ನ ವಿಚಿತ್ರ ಕನಸಿನ ಬಗ್ಗೆ ವಿವರವಾಗಿ ಜಯಂತಿ ಲಾಲನಿಗೆ ಮನದಟ್ಟು ಮಾಡಿ, ಕ್ಷಮೆಯಾಚಿಸಿ ವಜ್ರದಂಗಡಿಯಿಂದ ಹೊರಗೆ ಬಂದಿದ್ದ. ಅಂದು ರಾತ್ರಿ ಮನಸ್ಸು ಕಸಿವಿಸಿಯಲ್ಲೇ ಮುಳುಗಿತ್ತು. ಅರ್ಥವಾಗದ ಅಸ್ಪಷ್ಟ ಕನಸುಗಳು ಮುತ್ತಿಕೊಂಡಿದ್ದವು. ಮಾರನೆಯ ದಿನ ಆಫೀಸಿಗೆ ಹೋದ ತಕ್ಷಣ ಪಿಎ ಹರ್ಷವರ್ಧನ್ ಶಿರೋಡ್ಕರನನ್ನು ಕರೆದು ಹಿಂದಿನ ದಿನ ಗ್ರಾಂಟ್ ರೋಡಿನಲ್ಲಿ ಹಾಗೂ ವಿಕ್ರಂ ಜಯಂತಿ ಲಾಲ್ ಡೈಮಂಡ್ ಕಂಪನಿಯಲ್ಲಿ ತನಗಾದ ವಿಪರೀತವೆನಿಸುವ ಅನುಭವಗಳನ್ನು ಹೇಳಿ, ತನಗೆ ಸಂಪೂರ್ಣವಾಗಿ ಸಮಾಧಾನವಾಗುವಂತೆ ನಿರ್ದಿಷ್ಟವಾಗಿ ಕನಸುಗಳ ಬಗ್ಗೆ ವಿಶ್ಲೇಷಿಸುವ ಒಬ್ಬ ವ್ಯಾಖ್ಯಾನಕಾರನನ್ನು ಹುಡುಕಲು ಸಾಧ್ಯವೇ ಎಂದು ಕೇಳಿದ್ದ. ಅದಕ್ಕೆ ಉತ್ತರವಾಗಿ ಹರ್ಷವರ್ಧನ್ ಶಿರೋಡ್ಕರ್ ‘ಚಾಚ, ಕನಸುಗಳು ಮನಸಿಗೆ, ಮೆದುಳಿಗೆ ಸಂಬಂಧಪಟ್ಟವುಗಳಾಗಿರುವುದರಿಂದ ಅವುಗಳ ಬಗ್ಗೆ ಅಧ್ಯಯನ, ವಿಶ್ಲೇಷಣೆ ಮಾಡುವವರು ಡಾಕ್ಟರುಗಳೇ ಆಗಿರುತ್ತಾರೆ. ಅಂಥವರನ್ನು ನಮ್ಮ ಸೈಕಾಲಜಿ ಮತ್ತು ಮೆಡಿಕಲ್ ಪರಿಭಾಷೆಯಲ್ಲಿ ಸೈಕೋಥೆರಪಿಸ್ಟ್ ಎಂದು ಕರೆಯುತ್ತೇವೆ. ಪಾಲಿ ಹಿಲ್‌ನಲ್ಲಿ ಡಾಕ್ಟರ್ ಮನೋರಂಜನಿ ಎನ್ನುವ ಪ್ರಸಿದ್ಧ ಸೈಕೋಥೆರಪಿಸ್ಟ್ ಇದಾರೆ. ದೊಡ್ಡ ದೊಡ್ಡ ಸಿನಿಮಾ ನಟ ನಟಿಯರು, ಬಿಸಿನೆಸ್‌ಮನ್‌ಗಳು, ಕೈಗಾರಿಕೋದ್ಯಮಿಗಳು, ಐಎಎಸ್ ಐಪಿಎಸ್ ಅಧಿಕಾರಿಗಳು, ಪೊಲಿಟೀಷಿಯನ್ಸ್ ಅವರ ಕ್ಲಯೆಂಟ್ಸ್. ದಿನಕ್ಕೆ ಇಬ್ಬರು ಅಥವಾ ಮೂವರನ್ನು ಭೇಟಿ ಮಾಡುತ್ತಾರಷ್ಟೆ. ವಾರ, ಹದಿನೈದು ದಿನಗಳ ಮುಂಚೆಯೇ ರಿಸರ್ವ್ ಮಾಡಿಸಿರಬೇಕು. ಇನ್ನೊಂದು ಮುಖ್ಯ ಸಂಗತಿಯೆಂದರೆ ಕ್ಲಯೆಂಟ್ಸ್ ನೋಡಲು ಅವರು ಹೊರಗೆಲ್ಲೂ ಹೋಗುವುದಿಲ್ಲ. ಎಂಥವರಾದರೂ ಅವರ ಮನೆಗೇ ಹೋಗಬೇಕು. ಆಕೆಯ ಚಿಕ್ಕಪ್ಪನ ಮಗ ಕಿಶೋರ್ ಚೌಬೆ ಅಂತ ನನ್ನ ಪಿಯುಸಿ ಕ್ಲಾಸ್‌ಮೇಟ್, ದೆಹಲಿಯ ಡಾ. ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಡ್ರಗ್ಸ್ ಸೈಕಿಯಾಟ್ರಿ ಡಿಪಾರ್ಟ್‌ಮೆಂಟ್‌ನಲ್ಲಿದ್ದಾನೆ. ಅವನಿಗೆ ಫೋನ್ ಮಾಡಿದ್ರೆ ಬೇಗ ಅಪಾಯಿಂಟ್ಮೆಂಟ್ ಕೊಡಿಸುತ್ತಾನೆ’ ಎಂದು ಮಾಮೂಲಿ ವಿನಮ್ರ ಧ್ವನಿಯಲ್ಲಿ ಹೇಳಿದ್ದ.

ಗುನ್ನಾಲಾಲನಿಗೆ ಅದೇಕೋ ಏನೋ ಡಾಕ್ಟರ್ ಮನೋರಂಜನಿಯನ್ನು ಆದಷ್ಟು ಬೇಗ ಭೇಟಿಯಾಗುವ ಬಯಕೆ ಉಂಟಾಗಿತ್ತು. ಇತ್ತೀಚೆಗೆ ಸಣ್ಣ ವಿಷಯವನ್ನೂ ಸೀರಿಯಸ್ಸಾಗಿ ತೆಗೆದುಕೊಳ್ಳುವ ಗುಣ ಗುನ್ನಾಲಾಲನಲ್ಲಿ ಹುಟ್ಟಿರುವುದು ಹರ್ಷವರ್ಧನ್ ಶಿರೋಡ್ಕರನ ಗಮನಕ್ಕೆ ಬಂದಿತ್ತು. ಮನುಷ್ಯರಲ್ಲಿ ಇಂಥ ಗುಣ ಕ್ರಮೇಣ ಒಂದು ಮೇನಿಯಾ ಆಗಿ ಬೆಳೆಯುವ ಸಾಧ್ಯತೆಗಳು ಹೆಚ್ಚೆಂದು ಇಂಡಸ್ಟ್ರಿಯಲ್ ಸೈಕಾಲಜಿಯಲ್ಲಿ ಮಾಸ್ಟರ್ ಡಿಗ್ರಿ ಮಾಡಿರುವ ಹರ್ಷವರ್ಧನ್ ಶಿರೋಡ್ಕರನಿಗೆ ತಿಳಿಯದ್ದೇನಲ್ಲ. ಫ್ಯಾಕ್ಟರಿಯ ನೂರಾರು ನೌಕರರ ಆರೋಗ್ಯವನ್ನು ತನ್ನ ಇಂಟೆಲಿಜೆಂಟ್ ಕೌನ್ಸಿಲಿಂಗ್ ಮೂಲಕ ಸ್ಥಿರವಾಗಿಡುವುದರಲ್ಲಿ ಯಶಸ್ವಿಯಾಗಿದ್ದಾನೆ ಅವನು. ಹಾಗಾಗಿ ಮಫತ್ಲಾಲ್ ಗುನ್ನಾಲಾಲಿನಿಗೆ ಹರ್ಷವರ್ಧನ್ ಶಿರೋಡ್ಕರನ ಮೇಲೆ ಬಲವಾದ ನಂಬಿಕೆ ಮತ್ತು ವಿಶ್ವಾಸ. ತನ್ನ ಬಿಸಿನೆಸ್